# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–153/ವಾರ್ಡ್ ಸಭೆ/2020–21 ದಿನಾಂಕ:09/02/2021

## ವಾರ್ಡ್ –153ರ ವಾರ್ಡ್ ಸಭೆಯ ನಡವಳಿ

ದಿನಾಂಕ:09/02/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–153ರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ. ವರಲಕ್ಷ್ಮಿ ಸಹಾಯಕ ಆಯುಕ್ತರು, (ಆಡಳಿತ) ದಕ್ಷಿಣ ವಲಯ ವಾರ್ಡ್ 153ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ವರಲಕ್ಷ್ಮಮ್ಮ ಎಲ್. | ಸಹಾಯಕ ಆಯುಕ್ತರು (ಆಡಳಿತ) ದಕ್ಷಿಣ ವಲಯ | ಹಾಜರಿದ್ದರು |
| 2 | ಶ್ರೀ. ನರಸಿಂಹಯ್ಯ ಎಸ್. | ಕಿರಿಯ ಅಭಿಯಂತರರು ವಾರ್ಡ್–153–ಜಯನಗರ | ಹಾಜರಿದ್ದರು |
| 3 | ಶ್ರೀ. ರವೀಂದ್ರ ಹಿರೇಮಠ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–153 | |
| 4 | ಶ್ರೀ. ವಿದ್ಯಾಧರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–153 | ಹಾಜರಿದ್ದರು |
| 5 | ಶ್ರೀ. ಮೂರ್ತಿ | ಸಹಾಯಕ ಅಭಿಯಂತರರು ಬೆಸ್ಕಾಂ ಇಲಾಖೆ | ಹಾಜರಿದ್ದರು |
| 6 | ಶ್ರೀ. ಸುನಿಲ್ | ಕಿರಿಯ ಅಭಿಯಂತರರು BWSSB ಇಲಾಖೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀಮತಿ. ಪ್ರಮೀಳಾ | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಬಹದ್ದೂರ್ | ಸದಸ್ಯರು | ಹಾಜರಿದ್ದರು |
| 3 | ಶ್ರೀ. ಷರೀಫ್ | ಸದಸ್ಯರು | ಹಾಜರಿದ್ದರು |
| 4 | ಶ್ರೀ. ಲಕ್ಷ್ಮೀಶ | ಸದಸ್ಯರು | ಹಾಜರಿದ್ದರು |
| 5 | ಡಾ|| ಪ್ರಕಾಶ್ | ಸದಸ್ಯರು | ಹಾಜರಿದ್ದರು |

ಮು.ಹಿ.ನೋ.



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಪ್ರದೀಪ್ ಮೆಡೋನ | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಕಮಲ್ | ಸ್ಥಳಿಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ನಿಗಧಿತ ಸಮಯಕ್ಕೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ವರಲಕ್ಷ್ಮ ಎಲ್. ಸಹಾಯಕ ಆಯುಕ್ತರು (ಆಡಳಿತ) ರವರು ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು ವಿವರಗಳು ಈ ಕೆಳಕಂಡಂತಿವೆ.

1. **ವಾರ್ಡಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಶ್ರೀಮತಿ. ವರಲಕ್ಷ್ಮಮ್ಮ, ಸಹಾಯಕ ಆಯುಕ್ತರು (ಆಡಳಿತ) ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಮಾತನಾಡಿ, 9ನೇ ಮುಖ್ಯರಸ್ತೆಯಲ್ಲಿ ಹಾಲಿ ಇರುವ ಹೋಟೆಲ್‌ನವರು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಹೋಟೆಲ್ ಉದ್ದಿಮೆ ನಡೆಸುತ್ತಿದ್ದು, ಅತಿ ಶೀಘ್ರವಾಗಿ ತೆರವುಗೊಳಿಸಲು ತಿಳಿಸಿದರು. ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರು ಉತ್ತರಿಸಿ ಸಂಬಂಧಪಟ್ಟ ಹೋಟೆಲ್ ಉದ್ದಿಮೆದಾರರಿಗೆ ನೋಟಿಸ್ ಜಾರಿ ಮಾಡುವುದಾಗಿ ತಿಳಿಸಿದರು.

2. **ಬೆಸ್ಕಾಂ ವಿಭಾಗ :-**

- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರಾದ ಶ್ರೀ. ಷರೀಫ್ ರವರು ಮಾತನಾಡಿ ಬಿಹೆಚ್‌ಇಎಲ್ ಲೇಔಟ್‌ನ ವ್ಯಾಪ್ತಿಯಲ್ಲಿ ಬಿದ್ದಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಮೂರ್ತಿ ರವರು ಉತ್ತರಿಸಿ ಸದರಿ ಕಂಬಗಳನ್ನು ತೆರವುಗೊಳಿಸಲು ಕಾಲಾವಕಾಶ ನೀಡಬೇಕಾಗಿ ಕೋರಿರುತ್ತಾರೆ.

3. **BWSSB ವಿಭಾಗ :-**

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಕಮಲ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನ ಬಾಲ್ಡ್‌ವಿನ್ ಶಾಲೆ ಹತ್ತಿರ ಮ್ಯಾನ್‌ಹೋಲ್ ರಿಪೇರಿ ಮಾಡುವಂತೆ ಮತ್ತೊಮ್ಮೆ ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ BWSSB ಇಲಾಖೆಯ ಸಹಾಯಕ ಅಭಿಯಂತರರು ಶ್ರೀ.ಸುನಿಲ್ ರವರು ಉತ್ತರಿಸಿ ಈ ವಿಷಯವಾಗಿ ಕ್ರಮ ವಹಿಸಲು ಕಾಲಾವಕಾಶ ನೀಡುವಂತೆ ಕೋರಿದರು.

ಮು.ತಿ.ನೋ..



Scanned with CamScanner

## 4. <u>ಕಾಮಗಾರಿ ವಿಭಾಗದ ಬಗ್ಗೆ:-</u>

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮಡೋನ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಪಾದಚಾರಿ ಮಾರ್ಗದಲ್ಲಿ ಬಿದ್ದರಿರುವ ಡೆಬ್ರಿಸ್ ಅನ್ನು ತೆರವುಗೊಳಿಸುವಂತೆ ಮತ್ತೊಮ್ಮೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮಡೋನ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವಂತೆ ಹಿಂದಿನ ಸಭೆಯಲ್ಲಿ ಕೋರಿದ್ದರು. ಪ್ರಸ್ತುತ ಸಿ.ಸಿ. ಕ್ಯಾಮರಾ ಅಳವಡಿಸುವ ಕಾಮಗಾರಿ ಮುಗಿದಿರುವ ಹಿನ್ನೆಲೆಯಲ್ಲಿ ಮಾನ್ಯ ಅಧ್ಯಕ್ಷರಿಗೆ ಧನ್ಯವಾದ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮಡೋನ ರವರು ಮಾತನಾಡಿ ಚಿಕನ್‌ಕೌಂಟಿ ಮುಖ್ಯ ರಸ್ತೆಯಲ್ಲಿರುವ ಗೋಡೌನ್‌ಗಳನ್ನು ತೆರವುಗೊಳಿಸಲು ಕೋರಿದರು. ಈ ವಿಷಯವಾಗಿ ದಿನಾಂಕ:20-02-2021 ರಂದು ಗೋಡೌನ್‌ಗಳನ್ನು ತೆರವುಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಭೆಗೆ ವಾರ್ಡಿನ ಅಭಿಯಂತರರು ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಕಮಲ್ ರವರು ಮಾತನಾಡಿ ಬಾಲ್ಡ್‌ವಿನ್ ಶಾಲೆಯ ರಸ್ತೆಯ ಕಾಮಗಾರಿ ಮುಗಿದಿರುವ ಹಿನ್ನೆಲೆಯಲ್ಲಿ ಮಾನ್ಯ ಅಧ್ಯಕ್ಷರಿಗೆ ಧನ್ಯವಾದ ಅರ್ಪಿಸಿದರು.

## 5. <u>ಪೊಲೀಸ್ ಇಲಾಖೆ:-</u>

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮಡೋನ ರವರು ಮಾತನಾಡಿ ಬಿಹೆಚ್‌ಇಎಲ್ ಲೇಔಟ್ ಸುತ್ತಮುತ್ತಲಲ್ಲಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಮತ್ತೊಮ್ಮೆ ಕೋರಿದರು ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ಸಂಚಾರ ಪೊಲೀಸ್ ಠಾಣೆ ರವರಿಗೆ ಪತ್ರ ವ್ಯವಹರಿಸಿ ಕ್ರಮ ವಹಿಸುವುದಾಗಿ ಮತ್ತೊಮ್ಮೆ ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ನರಸಿಂಹಯ್ಯ ಎನ್.) | (ವರಲಕ್ಷ್ಮಮ್ಮ ಎಲ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್–153 ಜಯನಗರ | ವಾರ್ಡ್–153 ಜಯನಗರ |



Scanned with CamScanner